

# ಮಂಡೂಕ ಲೋಕ

## ಆ್ಯಕ್ಷನ್-ಕಟ್

■ ಪದ್ಮನಾಭ ಭಟ್

‘ಕಪ್ಪೆಗಳನ್ನು ಒಂದೆಡೆ ಕೂಡಿಹಾಕಿದಂತೆ’ ಎಂಬುದು ನಮ್ಮಲ್ಲಿ ಬಹುಪ್ರಚಲಿತದಲ್ಲಿರುವ ವ್ಯಂಗ್ಯೋಕ್ತಿ. ಕಪ್ಪೆಗಳು ಒಂದು ಕಡೆಯಲ್ಲಿ ನಿಲ್ಲುವ ಪ್ರಾಣಿಗಳೇ ಅಲ್ಲ. ಚಂಗನೆ ಜಿಗಿಯುತ್ತ, ಪುಳಕ್ಕನೆ ನೀರಲ್ಲಿ ನೆಗೆಯುತ್ತ, ಅತ್ತ ಮೂಸುತ್ತ, ಇತ್ತ ಹರೆಯುತ್ತ ಇರುವ ಕಪ್ಪೆಗಳನ್ನು ಪೀಡೆಯಂತೆ ಕಾಣುವವರೇ ಹೆಚ್ಚು. ಅವುಗಳ ತ್ರಿಕೋನಾಕಾರದ ಮುಖ, ಸದಾ ಪಸೆಯಾಡುತ್ತಿರುವ ಮೈ, ಪಂಜಿನಂಥ ಕಾಲುಗಳನ್ನು ನೋಡಿ ಹೇಸಿಕೊಳ್ಳುವವರೂ ಕಮ್ಮಿಯಿಲ್ಲ. ಆದರೆ ಮಂಡೂಕಗಳು ವನ್ಯಜೀವಿ ಛಾಯಾಗ್ರಾಹಕರಿಗೆ ಮಾತ್ರ ಸದಾ ಹಾಟ್ ಫೇವರಿಟ್. ನೀರಿಗೆ ಜಿಗಿಯುತ್ತಿರುವುದು, ಕಗ್ಗತ್ತಲ ಹಿನ್ನೆಲೆಯಲ್ಲಿ ದೊಡ್ಡ ಕಣ್ಣುಗಳನ್ನು ಬಿಟ್ಟುಕೊಂಡು ಕೂತಿರುವುದು, ಬಾಯಿ ತೆರೆದಿರುವುದು – ಹೀಗೆ ಕಪ್ಪೆಗಳ ಅವವೇ ಥರದ ಫೋಟೊಗಳನ್ನು ನೋಡಿಯೇ ಇರುತ್ತೇವೆ.

ಆದರೆ ಈ ಮಂಡೂಕಗಳು ಕ್ಯಾಮೆರಾಕ್ಕೆ ಪೋಸ್ ಕೊಡಬಹುದಾ? ಮಸೂರಕ್ಕೆ ಮುಖಮಾಡಿ, ಕ್ಲಿಕ್ಕಿಸಿದಾಗ ಸೊಕ್ಕಿನಿಂದ ನಿಂತುಕೊಳ್ಳಬಹುದಾ?